**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,**

**ಹೆಚ್.ಡಿ.ಕೋಟೆ**

ಸಿ.ಸಿ.1164/2024

**ಪಿರ್ಯಾದುದಾರರು** **ಆರೋಪಿ**

**ವಿರುದ್ಧ**

ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಷಡಕ್ಷರಿ ಮತ್ತು ಇತರರು

:: **ದೋಷಾರೋಪಣೆ** ::

**ಶ್ರೀ ಸಂತೋಷ ಕೊಠಾರಿ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹಚ್.ಡಿ.ಕೋಟೆ , ಆದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀಷಡಕ್ಷರಿ ಬಿನ್ ಗುರುಸ್ವಾಮಪ್ಪ,
   57 ವರ್ಷ,
2. ಶ್ರೀ.ಆನಂದ ಬಿನ್ ಹೆಚ್.ಪಿ.ಕಪ್ಪಣ್ಣ
   38 ವರ್ಷ,
3. ಶ್ರೀ.ನೀಲಪ್ಪ ಬಿನ್ ಲಿಂಗಪ್ಪ (ದೋಷಾರೋಪಣ ಪಟ್ಟಿಯಿಂದ ಕೈಬಿಡಲಾಗಿದೆ)
4. ಶ್ರೀ.ಲೋಕೇಶ
   52 ವರ್ಷ,
5. ಶ್ರೀ.ರಮೇಶ ಬಿನ್ ಲೇಟ್ ಹೆಚ್.ಪಿ.ಶಿವಪ್ಪ
   42 ವರ್ಷ
6. ಶ್ರೀಮತಿ ಲೋಲಾಕ್ಷಿ ಬಿನ್ ಹೆಚ್.ಪಿ.ಶಿವಪ್ಪ
   40 ವರ್ಷ
7. ಶ್ರೀಮತಿ.ರಾಜೇಶ್ವರಿ ಬಿನ್ ರಮೇಶ
   36 ವರ್ಷ

   ಆರೋಪಿ 1, 2 ಮತ್ತು 4 ರಿಂದ 7 ರವರ ವಿಳಾಸ
   ಹೊಸಹಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ 08.08.2024 ರಂದು ಬೆಳಿಗ್ಗೆ 08.30 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಒಂದುಗೂಡಿ ಹೆಚ್.ಡಿ.ಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯ, ಹೊಸಹಳ್ಳಿ ಗ್ರಾಮದ ರಮೇಶ ಬಿನ್ ಹೆಚ್.ಪಿ.ಶಿವಪ್ಪರವರ ಮನೆಯ ಮುಂದೆ ರಸ್ತೆಯಲ್ಲಿ ಮಳೆಯ ಬಿದ್ದ ನೀರು ಸಾಕ್ಷಿ-1 ರವರ ಮನೆಯ ಕಡೆಗೆ ಹೋಗದಂತೆ ರಸ್ತೆಗೆ ಸಣ್ಣದಿಂಡನ್ನು ಹಾಕುತ್ತಿದ್ದ

ವಿಚಾರದಲ್ಲಿ ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿಗಳಾದ ನೀವು ಸಾಕ್ಷಿ-1 ರವರನ್ನು ಕುರಿತು "ಬೋಳಿ ಮಗನೇ, ಸೂಳೇ ಮಗನೇ"ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿದ್ದು, ಆ ಮೂಲಕ 1, 2, 4 ರಿಂದ 7 ನೇ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ 2023 ಕಲಂ.352 ಸಹವಾಚಕ ಕಲಂ.190 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಗಳಾದ ನೀವುಗಳು ಕೃತ್ಯವನ್ನು ಮುಂದುವರೆಸುತ್ತಾ, ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿಗಳು ದೊಣ್ಣೆಯಿಂದ ಸಾಕ್ಷಿ-1 ರವರಿಗೆ ಹೊಡೆದಿದ್ದು, ಜಗಳ ಬಿಡಿಸಲು ಬಂದ ಸಾಕ್ಷಿ-2 ರವರಿಗೆ 4 ಮತ್ತು 5 ನೇ ಆರೋಪಿಗಳು ಕುಡುಗೋಲಿನಿಂದ ಎಡಗಣ್ಣಿನ ಮೇಲ್ಭಾಗಕ್ಕೆ ಹೊಡೆದು, ಜಗಳ ಬಿಡಿಸಲು ಬಂದ ಸಾಕ್ಷಿ-3 ರವರಿಗೆ 6 ಮತ್ತು 7 ನೇ ಆರೋಪಿಗಳು ಕುಡುಗೋಲಿನಿಂದ ಎಡಗಣ್ಣಿನ ಮೇಲ್ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ 1, 2, 4 ರಿಂದ 7 ನೇ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ 2023 ಕಲಂ.118(1) ಸಹವಾಚಕ ಕಲಂ 190 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

13 ನೇ ಜೂನ್ ಮಾಹೆ 2025.

**(ಸಂತೋಷ ಕೊಠಾರಿ)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ.